ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯಿಂದ....

# ಸೂಜಿ-ದಾರ

ಸಂಪುಟ : 7 ಸಂಚಿಕೆ : 4 ಪುಟ : 8 ಜುಲೈ-ಆಗಸ್ಟ್ - 2013

## ಕಾರ್ಮಿಕರ ಜೀವಕ್ಕೆ ಬೆಲೆಯಿಲ್ಲ. . .

ಕಳೆದ 6 ತಿಂಗಳಿಂದ ದಕ್ಷಿಣ ಏಷ್ಯಾದ ಕಾರ್ಮಿಕ ಸಮುದಾಯದಲ್ಲಿ ಕೇವಲ ದುರ್ಘಟನೆಗಳ ಸರಣಿಯೇ ಸಂಭವಿಸಿ ಎಲ್ಲರಲ್ಲಿಯೂ ಒಂದು ರೀತಿಯ ಶೋಕದ ವಾತಾವರಣ ಮೂಡಿದೆ. ದುಡ್ಡಿನ ಮುಂದೆ ಕಾರ್ಮಿಕರ ಜೀವಕ್ಕೆ ಬೆಲೆಯಿಲ್ಲ ಎಂದು ಎಲ್ಲರಿಗೂ ನಿಚ್ಚಳವಾಗಿ ತಿಳಿಯುತ್ತಿದೆ.

*ಬಾಂಗ್ಲಾದೇಶ – ಬಹುಮಹಡಿ ಕಟ್ಟಡವೊಂದು ಕುಸಿದು 1000 ಕ್ಕೂ ಹೆಚ್ಚು ಗಾರ್ಮೆಂಟ್ಸ್ ಕಾರ್ಮಿಕರ ಸಾವು." – ಏಪ್ರಿಲ್. 24 2013*

*– ಅಗ್ನಿದುರಂತದಲ್ಲಿ ಪ್ರಾಣ ಕಳೆದುಕೊಂಡ ಗಾರ್ಮೆಂಟ್ಸ್ ಕಾರ್ಮಿಕರು-ಜನವರಿ 2013*

*– ಅಗ್ನಿ ದುರಂತದಲ್ಲಿ ಗಾರ್ಮೆಂಟ್ಸ್ ಕಾರ್ಮಿಕರ ಸಾವು – ನವೆಂಬರ್ 2012*

*ಪಾಕಿಸ್ತಾನ – ಅಗ್ನಿ ದುರಂತದಲ್ಲಿ ಗಾರ್ಮೆಂಟ್ಸ್ ಕಾರ್ಮಿಕರ ಸಾವು – ಸೆಪ್ಟೆಂಬರ್ 2012*

*ಬೆಂಗಳೂರು – ಕಾರ್ಖಾನೆಯ ಬಸ್ ಅಪಘಾತ, ಗಾರ್ಮೆಂಟ್ಸ್ ಕಾರ್ಮಿಕ ಸಾವು–ಜುಲೈ 2012*

*– ಕಾರ್ಖಾನೆಯ ಕಲುಷಿತ ನೀರು ಕುಡಿದು ಗಾರ್ಮೆಂಟ್ಸ್ ಕಾರ್ಮಿಕರು ಅಸ್ವಸ್ಥ ಮತ್ತು ಕಾರ್ಮಿಕರೊಬ್ಬರ ಸಾವು – 2010. 2008. 2004*

*– ಕಾರ್ಖಾನೆಯ ಬಸ್ ಢಿಕ್ಕಿ – ಗಾರ್ಮೆಂಟ್ಸ್ ಉದ್ಯೋಗಿ ಸಾವು – ಏಪ್ರಿಲ್. 2007, 2009, 2010*

*ದೆಹಲಿ – ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಬೆಂಕಿ ಅಪಘಾತ, 5 ಸಾವು – ಜೂನ್ 2005*

*ಸ್ನೇಹಿತರೇ,*

ಇದು ಕಳೆದ ಕೆಲವು ವರ್ಷಗಳಲ್ಲಿ ಬಾಂಗ್ಲಾ ದೇಶ. ಪಾಕಿಸ್ತಾನ ಮತ್ತು ಭಾರತದಲ್ಲಿ ನಡೆದ ದುರ್ಘಟನೆಗಳ ಒಂದು ಸ್ಥೂಲ ವಿವರ. ಬಾಂಗ್ಲಾ ದೇಶವೊಂದರಲ್ಲೇ 2005 ರಿಂದ ನಡೆದ ಸರಣಿ ದುರ್ಘಟನೆಗಳಲ್ಲಿ 1234 ಕಾರ್ಮಿಕರು ಮೃತಪಟ್ಟಿದ್ದಾರೆ, 1505 ಕಾರ್ಮಿಕರು ಗಾಯಗೊಂಡಿದ್ದಾರೆ. ಬಡ ಕಾರ್ಮಿಕರು ತಮ್ಮ ಜೀವನ ನಡೆಸಲು ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ದುಡಿಯಲು ಬರುತ್ತಾರೆ. ಆದರೆ ಇವರ ಜೀವ ರಕ್ಷಣೆ ಯಾರ ಹೊಣೆ?

ಬಂಡವಾಳಶಾಹೀ ವ್ಯವಸ್ಥೆಯು ಪ್ರಪಂಚವನ್ನೇ ಆಳುತ್ತಿರುವ ಈ ಸಂದರ್ಭದಲ್ಲಿ ಕಾರ್ಮಿಕರ ಜೀವಗಳಿಗೆ ಏನೂ ಬೆಲೆಯಿಲ್ಲವೆಂಬುದನ್ನು ಈ ಘಟನೆಗಳು ಸಾಬೀತು ಪಡಿಸುತ್ತಿವೆ. ಒಂದು ಪ್ರಜಾಪ್ರಭುತ್ವ ದೇಶದಲ್ಲಿ,








Scanned with OKEN Scanner

ಆಳುವ ಸರ್ಕಾರ, ಕಾನೂನುಗಳನ್ನು ಸಮರ್ಥವಾಗಿ ಜಾರಿಗೆ ತರದ ಪರಿಣಾಮವಾಗಿ, ಮಾಲೀಕರು ಕಾನೂನುಗಳನ್ನು ಉಲ್ಲಂಘಿಸುತ್ತಿರುವುದರ ಪರಿಣಾಮವಾಗಿ, ಕಾರ್ಮಿಕರು ತಮ್ಮ ಪ್ರಾಣಗಳನ್ನು ಕಳೆದುಕೊಳ್ಳುತ್ತಿದ್ದಾರೆ.

ಅತ್ಯಂತ ಕಡಿಮೆ ವೇತನ ಪಡೆದು ಈ ಕಾರ್ಮಿಕರು ಹೊಲೆದ ಬಟ್ಟೆಗಳನ್ನು ಸಾವಿರಾರು ರೂ.ಗಳಿಗೆ ಮಾರಾಟ ಮಾಡಿ ಅತಿ ಹೆಚ್ಚು ಲಾಭ ಮಾಡಿ ಕೊಳ್ಳುತ್ತಿರುವ ಅಂತರರಾಷ್ಟ್ರೀಯ ಬ್ರಾಂಡ್‌ಗಳು ಹಾಗೂ ಈ ಕಾರ್ಖಾನೆಗಳು ಸುರಕ್ಷಿತವಾಗಿವೆ, ಎಂದು "ಮಾನ್ಯತಾ ಪ್ರಮಾಣಪತ್ರಗಳನ್ನು" ವಿತರಿಸುತ್ತಿರುವ ಸೋಷಿಯಲ್ ಆಡಿಟಿಂಗ್ ಸಂಸ್ಥೆಗಳೂ ಸಹ ಈ ದುರ್ಘಟನೆಗಳಿಗೆ ಕಾರಣರಾಗಿದ್ದಾರೆ.

ಈ ರೀತಿಯ ದುರ್ಘಟನೆಗಳು ಬಾಂಗ್ಲಾದೇಶದಲ್ಲಿ ಮಾತ್ರ ಸೀಮಿತ ವಾಗಿಲ್ಲ, ಅತ್ಯಂತ ಕಡಿಮೆ ವೇತನಕ್ಕೆ ಕಾರ್ಮಿಕರು ಸಿಗುವರೆಂಬ ಕಾರಣಕ್ಕೆ ಏಷ್ಯಾ ದೇಶಗಳಿಗೆ ಸ್ಥಳಾಂತರವಾದ ಗಾರ್ಮೆಂಟ್ಸ್ ಉದ್ಯಮದಲ್ಲಿ ಕಾರ್ಮಿಕರ ಜೀವವೂ ಅಗ್ಗವಾಗಿದೆ. ಅಗ್ನಿ ದುರಂತಗಳು, ವಿವಿಧ ಅಪಘಾತಗಳು ಕಾರ್ಮಿಕರನ್ನು ಆಹುತಿ ತೆಗೆದುಕೊಳ್ಳುತ್ತಲೇ ಇವೆ.

ಜಾಗತಿಕ ಗಾರ್ಮೆಂಟ್ಸ್ ಉದ್ಯಮದಲ್ಲಿ ಎಲ್ಲದಕ್ಕೂ ಬೆಲೆಯಿದೆ, ಎಲ್ಲದಕ್ಕೂ ಮೌಲ್ಯವಿದೆ, ಅದರೆ ಕಾರ್ಮಿಕರ ಪ್ರಾಣವೊಂದನ್ನು ಬಿಟ್ಟು!!!!

ದಕ್ಷಿಣ ಏಷ್ಯಾದ ಗಾರ್ಮೆಂಟ್ಸ್ ಕಾರ್ಮಿಕರೆಲ್ಲರೂ ಇಂದು ಹೆಚ್ಚು ಕಡಿಮೆ ಏಕ ರೀತಿಯ ಶೋಷಣೆಗಳನ್ನು ಅನುಭವಿಸುತ್ತಿದ್ದಾರೆ. ಉದ್ಯಮ ಎಷ್ಟೇ ಜಾಗತಿಕವಾದರೂ ಪ್ರಬಲ ಬಂಡವಾಳಶಾಹೀ ವ್ಯವಸ್ಥೆಯು ಕಾರ್ಮಿಕರನ್ನು ತಮ್ಮ ತಮ್ಮ ಸ್ಥಳಗಳಲ್ಲಿಯೇ ಒಂದಾಗದಂತೆ ತಡೆಹಿಡಿಯುತ್ತಿವೆ, ಅತ್ಯಂತ ಮುಕ್ತವಾಗಿ ಕಾರ್ಮಿಕರ ಸಂಘಟನಾ ಸ್ವಾತಂತ್ರ್ಯವನ್ನು ಹತ್ತಿಕ್ಕುತ್ತಿವೆ. ಈ ಪ್ರಬಲ ವ್ಯವಸ್ಥೆಯನ್ನು ಪ್ರಶ್ನಿಸಲು, ವಿರೋಧಿಸಲು ಅತ್ಯಂತ ಮೂಲಭೂತ ಅಂಶವೆಂದರೆ ಅವರ ಒಗ್ಗಟ್ಟೊಂದೇ. ಆದರೆ ಅದಕ್ಕೇ ಈ ಸಮಯದಲ್ಲಿ ಈ ನಿಟ್ಟಿನಲ್ಲಿ ಯಾರಿಗೇ ಅನ್ಯಾಯವಾದರೂ ಎಲ್ಲ ಸ್ಥಳಗಳಲ್ಲಿಯೂ ಇದರ ವಿರುದ್ಧ ದನಿಯೆತ್ತಿದರೆ ಕಣ್ಣಿಲ್ಲದ, ಕಿವಿಯಿಲ್ಲದ, ಹೃದಯವಿಲ್ಲದ ಬಂಡವಾಳಶಾಹೀ ವ್ಯವಸ್ಥೆಗೆ ಕೊಂಚ ಮಟ್ಟಿಗಾದರೂ ನಮ್ಮ ವಿರೋಧ ತೋರಿಸಬಹುದು.


**ಸೂಜಿ-ದಾರ** ಸಂಪಾದಕ ಮಂಡಳಿ

ಗೌರವ ಸಂಪಾದಕರು : ದು. ಸರಸ್ವತಿ

ಸಂಪಾದಕರು : ಪ್ರತಿಭಾ ಆರ್.

ಸಲಹೆ–ಸಹಕಾರ : ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಹಾಗೂ **GATWU** ಪದಾಧಿಕಾರಿಗಳು

Registered with Registrar of Newspapers of India under No. KARKAN/2011/21668

**'SUJI-DARA',** REGD.No.: MAG(2) CR/PRB/32/11-12



*ಈ ಸಂಚಿಕೆಯನ್ನು ಪ್ರಾಯೋಜಿಸಿದವರು*

**ಡಾ. ಆರ್. ಸುನಂದಮ್ಮ**

(ಮಹಿಳಾ ಅಧ್ಯಯನ ಕೇಂದ್ರ, ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ)

ಅವರಿಗೆ

**ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಹಾಗೂ GATWU**

ಧನ್ಯವಾದಗಳನ್ನು ಅರ್ಪಿಸುತ್ತಿವೆ.


## ಅಂತರರಾಷ್ಟ್ರೀಯ ಸುರಕ್ಷತೆಯ ಒಪ್ಪಂದ

ಗಾರ್ಮೆಂಟ್ಸ್ ಕಾರ್ಖಾನೆಗಳು ಸುರಕ್ಷಿತವಾಗಿದೆಯೇ ಎಂಬುದರ ಬಗ್ಗೆ ಕೊಂಚವೂ ಗಮನ ಹರಿಸದೆ ಕೇವಲ ತಮ್ಮ ಲಾಭದತ್ತ ಮಾತ್ರ ಗಮನ ಹರಿಸುವಲ್ಲಿ ಮಗ್ನರಾಗಿರುವ ಬಹುರಾಷ್ಟ್ರೀಯ ಬ್ರಾಂಡ್‌ಗಳು ಬಾಂಗ್ಲಾದಲ್ಲಿ ಸರಣಿಯಲ್ಲಿ ಸಂಭವಿಸುತ್ತಿರುವ ದುರ್ಘಟನೆಗಳಿಂದ ಕೊಂಚ ವಿಚಲಿತರಾಗಿ ಸುರಕ್ಷತೆಗೆ ಸಂಬಂಧಪಟ್ಟಂತೆ ಅಂತರರಾಷ್ಟ್ರೀಯ ಒಪ್ಪಂದವೊಂದಕ್ಕೆ ಬದ್ಧವಾಗಿರುತ್ತೇವೆ ಎಂದು ಮುಂದೆ ಬಂದಿದ್ದಾರೆ. ಅಂತೂ ಈ ಕಣ್ಣಿಗೆ ಕಾಣದ ದೈತ್ಯ ಮಾಲೀಕರು ಕೊಂಚ ಕದಲಲು ಸಾವಿರಾರು ಕಾರ್ಮಿಕರು ಪ್ರಾಣ ಬಿಡಬೇಕಾದದ್ದು ವಿಪರ್ಯಾಸ! ಇದರಲ್ಲಿಯೂ ಸಹ ಕೆಲವು ಬ್ರಾಂಡ್‌ಗಳು ಇಲ್ಲಸಲ್ಲದ ನೆಪ ಹೇಳಿ ತಪ್ಪಿಸಿಕೊಳ್ಳಲು ಹವಣಿಸುತ್ತಿವೆ.

ಬಾಂಗ್ಲಾದ ಕಾರ್ಖಾನೆಯಲ್ಲಿ ಬೆಂಕಿ ಅಪಘಾತದಿಂದ ಮೃತಪಟ್ಟ ನಮ್ಮ ಸಹೋದರ ಸಹೋದರಿಯರ ಸಾವಿಗೆ, ಅತೀವ ಶ್ರಮದಿಂದ ದುಡಿಯುತ್ತಿರುವ ಸಾವಿರಾರು ಮಹಿಳೆ ಮತ್ತು ಪುರುಷರಿಗೆ ಇನ್ನು ಸರಿಹೋಗದಂತೆ ಹದಗೆಟ್ಟಿರುವ ಆರೋಗ್ಯ ಪರಿಸ್ಥಿತಿಗೂ ಸಹ ಈ ಬಹುರಾಷ್ಟ್ರೀಯ ಬ್ರಾಂಡ್‌ಗಳೇ ಹೊಣೆಯಾಗಿದ್ದಾರೆ. ಹಲವಾರು ದೇಶಗಳಲ್ಲಿ ನಾವು ಕಾರ್ಮಿಕರು ಸಂಘಟಿತರಾಗಲು ಪ್ರಯತ್ನಿಸಿದಾಗ ಕಾರ್ಖಾನೆಗಳಲ್ಲಿ ನಮ್ಮ ವಿರುದ್ಧ ನಡೆಯುವ ಸಂಘಟನಾ ವಿರೋಧೀ ಆಂದೋಲನಕ್ಕೂ ಸಹ ಹೊಣೆಗಾರರಾಗಿರುವವರು ಈ ಬ್ರಾಂಡ್‌ಗಳು,

**ಈ ಉದ್ಯಮದ ನೀತಿಯನ್ನು ನಾವು ಬದಲಿಸಲೇ ಬೇಕಿದೆ... ಈಗಲೇ!** ನಮ್ಮ ಕೆಲಸದ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಕೆಳಮಟ್ಟದಿಂದಲೇ ನಾವು ಪ್ರಯತ್ನಿಸಬೇಕಿದೆ. ಕಾರ್ಮಿಕರ ಹಿತಾಸಕ್ತಿಯನ್ನು ಕಾನೂನಾತ್ಮಕವಾಗಿ ಮತ್ತು ನೇರವಾಗಿ ಪ್ರತಿನಿಧಿಸುವ, ಕಾರ್ಖಾನೆಗಳ ಕಾರ್ಮಿಕ ಸಂಘಟನೆಗಳು, ಈ ಉದ್ಯಮದ ಯಜಮಾನರಾದ, ಈ ಪ್ರೊಡಕ್ಷನ್ ಮಾದರಿಯ ನಿಜವಾದ ಮಾಲೀಕರಾದ ಮತ್ತು ತಮ್ಮ ಲಾಭ ಗಳಿಸಲು ನಮ್ಮನ್ನು ದುಃಸ್ಥಿತಿಗೆ ದೂಡಿರುವಂತಹ ಬ್ರಾಂಡ್‌ಗಳೊಡನೆ ವ್ಯವಹರಿಸುವಂತಾಗಬೇಕು. ☐

## GATWU ಪ್ರತಿಭಟನೆ




*ಬಾಂಗ್ಲಾದಲ್ಲಿ ಕಟ್ಟಡ ಕುಸಿತದಿಂದಾದ ಅನಾಹುತದಲ್ಲಿ ಪ್ರಾಣ ಬಿಟ್ಟ ಗಾರ್ಮೆಂಟ್ಸ್ ಕಾರ್ಮಿಕರಿಗೆ ಶ್ರದ್ಧಾಂಜಲಿ ಅರ್ಪಿಸುವುದು ಮತ್ತು ಅಲ್ಲಿನ ಗಾರ್ಮೆಂಟ್ಸ್ ಕಾರ್ಮಿಕರಿಗೆ ಬೆಂಬಲ ಸೂಚಿಸುವುದು ಈ ನಿಟ್ಟಿನಲ್ಲಿ ಬಹು ಮುಖ್ಯವೆಂದು GATWUವು ದಿನಾಂಕ 12–05–2013 ರಂದು ಶ್ರದ್ಧಾಂಜಲಿ ಮತ್ತು ಮಾಲೀಕರು, ಸರಕಾರ ಹಾಗೂ ಬ್ರಾಂಡ್‌ಗಳ ವಿರುದ್ಧ ಪ್ರತಿಭಟನೆ ಹಮ್ಮಿಕೊಂಡಿತ್ತು.*




Scanned with OKEN Scanner

# ಮಂಗಳೂರಿನಲ್ಲಿ ಮೊಳಗಿದ ಘೋಷಣೆ :
# 'ಇನ್ನು ಸಾಕು... ಮಹಿಳೆಯರ ಮೇಲಿನ ಹಿಂಸೆ ಕೊನೆಯಾಗಲಿ'

2013ರ ಮಹಿಳಾ ದಿನಾಚರಣೆಯನ್ನು ವಿಭಿನ್ನವಾಗಿ ಆಚರಿಸಬೇಕು ಮತ್ತು ಮಹಿಳೆಯರ ಮೇಲಾಗುವ ಎಲ್ಲ ರೀತಿಯ ದೌರ್ಜನ್ಯವನ್ನು ಖಂಡಿಸಬೇಕು ಎಂದು ಯೋಚಿಸಿ ಕರ್ನಾಟಕದಾದ್ಯಂತ ಮಹಿಳಾ ಸಂಘಟನೆಗಳು, ಪ್ರಗತಿಪರರರು, ಸಾಮಾಜಿಕ ಕಾರ್ಯಕರ್ತರು ನಿರ್ಧರಿಸಿ ಮಾಡಲು ಹೊರಟ ಕಾರ್ಯಕ್ರಮ, ಮಾರ್ಚ್ 08ರ "ಇನ್ನು ಸಾಕು". ಇದಕ್ಕೆ ಆಯ್ಕೆ ಮಾಡಿಕೊಂಡ ಜಾಗ ಮಂಗಳೂರು. ಕಾರಣ, ಇಲ್ಲಿ ಮಹಿಳೆಯರ ಮೇಲೆ ನಡೆದ ಸರಣಿ ದೌರ್ಜನ್ಯ. ಅದನ್ನು ಖಂಡಿಸಿ ಕರ್ನಾಟಕದ ಸುಮಾರು 80 ಮಹಿಳಾಪರ ಸಂಘಟನೆಗಳು ಮಾಡಿದ ಮಹಿಳಾ ದಿನಾಚರಣೆ ಯಶಸ್ವಿಯಾಗಿ ನಡೆಯಿತು, ಮತ್ತು ಮಂಗಳೂರಿನ ಕೋಮುವಾದಕ್ಕೆ




ಆಹ್ವಾನಿಸಲಾಗಿತ್ತು. ಕಾರ್ಯಕ್ರಮವನ್ನು ಭನ್ವರಿದೇವಿಯವರು ಹಾಡಿನ ಮೂಲಕ ಆರಂಭಮಾಡಿ ತಮ್ಮ ಜೀವನದಲ್ಲಿ ನಡೆದ ಅತ್ಯಾಚಾರ ಮತ್ತು ಅದರ ವಿರುದ್ಧ ಹೋರಾಡಿದ ರೀತಿಯನ್ನು ವಿವರಿಸಿದರು. ನಾವು ಒಟ್ಟಾಗಿ ಇರದಿದ್ದರೆ ಏನೂ ಸಾಧಿಸಲು ಸಾಧ್ಯವಾಗುವುದಿಲ್ಲ. ಒಗ್ಗಟ್ಟಾಗಿ ನಿಂತರೆ ಏನನ್ನಾದರೂ ಸಾಧಿಸಬಹುದು ಎಂದು ಎಲ್ಲಾ ಮಹಿಳೆಯರಿಗೂ ಕರೆನೀಡಿದರು. ಇದರಲ್ಲಿ GATWU ಮತ್ತು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯ ಸುಮಾರು 30 ಕಾರ್ಯಕರ್ತರು ಭಾಗವಹಿಸಿದ್ದರು. ಒಟ್ಟಾರೆ ಕಾರ್ಯಕ್ರಮ ಮಂಗಳೂರಿನಲ್ಲಿ ನಡೆದಿರುವ ಮಹಿಳಾ ದೌರ್ಜನ್ಯಕ್ಕೆ ತಿರುಗೇಟು ನೀಡಿದಂತೆ ಇತ್ತು.

*ಜಾತಿ, ಧರ್ಮ, ಲಿಂಗತ್ವದ ಆಧಾರದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಶೋಷಣೆ, ಅತ್ಯಾಚಾರಗಳು ಅವ್ಯಾಹತವಾಗಿ ನಡೆದಿರುವ ಈ ಸಂದರ್ಭದಲ್ಲಿ, ವಿಶೇಷವಾಗಿ ಮಂಗಳೂರಿನಲ್ಲಿ ಧರ್ಮಾಧಾರಿತ ಶೋಷಣೆಗಳು ಹೆಚ್ಚುತ್ತಿರುವ ಈ ದಿನಗಳಲ್ಲಿ ನಮ್ಮ ಪ್ರಬಲವಾದ ವಿರೋಧವನ್ನು ವ್ಯಕ್ತಪಡಿಸಲು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭವನ್ನು ಸಮರ್ಥವಾಗಿ ಬಳಸಿಕೊಳ್ಳಲು ಯೋಚಿಸಿದೆವು. ಇದರ ಪರಿಣಾಮವಾಗಿ 2013ರ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮಂಗಳೂರಿನಲ್ಲಿ ಆಚರಿಸಬೇಕೆಂದು ಕರ್ನಾಟಕದ ಎಲ್ಲ ಮಹಿಳಾ ಪರ ಸಂಘಟನೆಗಳು ತಾತ್ವಿಕ ನಿಲುವು ತೆಗೆದುಕೊಂಡವು. ಮಾರ್ಚ್ 5, 6, 7ರಂದು ಕರ್ನಾಟಕದಾದ್ಯಂತ ಹಲವಾರು ಸಂಘಟನೆಗಳ ಸಾವಿರಾರು ಕಾರ್ಯಕರ್ತರು, ಸಾರ್ವಜನಿಕರು, ಪ್ರಮುಖ ಲೇಖಕಿಯರು, ಪ್ರಗತಿಪರ ಹೋರಾಟಗಾರರು ಎಲ್ಲರೂ ಮಂಗಳೂರಿನಲ್ಲಿ ನೆರೆದು ಕೂಗಿದ "ಇನ್ನು ಸಾಕು, ಮಹಿಳೆಯರ ಮೇಲಿನ ದೌರ್ಜನ್ಯ" ಎಂಬ ಘೋಷಣೆ ಮುಗಿಲು ಮುಟ್ಟಿತ್ತು.*

ತಿರುಗೇಟು ನೀಡಿದಂತಿತ್ತು. ಮಹಿಳೆಯರ ಮೇಲಿನ ದೌರ್ಜನ್ಯ ಇನ್ನು ನಡೆಯದು ಎಂದು "ಇನ್ನು ಸಾಕು, ಇನ್ನು ಸಾಕು..." ಎಂದು ಸಾರಿ ಸಾರಿ ಕೂಗಿ ಹೇಳಿದವು.

ಈ ಕಾರ್ಯಕ್ರಮಕ್ಕೆ ದೂರದ ರಾಜಸ್ಥಾನದಿಂದ ಭನ್ವರಿದೇವಿಯವರನ್ನು

| ಮಾರ್ಚ್ 8ರ ಈ ಕಾರ್ಯಕ್ರಮಕ್ಕೆ ಭಾಗವಹಿಸಲು ಖರ್ಚಾದ ಹಣ | |
|---|---|
| ಗಾ.ಮ.ಕಾ. ಮುನ್ನಡೆ ಮತ್ತು GATWU | 12,102–00 |
| ಕಾರ್ಮಿಕರಿಂದ ದೇಣಿಗೆ | 13,300–00 |
| ಒಟ್ಟು | 25,402–00 |



# ಶಾಹಿ ಎಕ್ಸ್‌ಪೋರ್ಟ್ಸ್ ಕಾರ್ಖಾನೆಗಳಲ್ಲಿ
# "ಕಾಂಪ್ ಆಫ್ ಗಂಟೆಗಳ" ಹೆಸರಿನಲ್ಲಿ ಕಾನೂನು ಬಾಹಿರ ಹೆಚ್ಚುವರಿ ಕೆಲಸ

*ಶಾಹಿ ಎಕ್ಸ್‌ಪೋರ್ಟ್ಸ್ ಸಮೂಹವು ಬೆಂಗಳೂರಿನಲ್ಲಿ ಹಲವಾರು ಕಾರ್ಖಾನೆಗಳನ್ನು ಹೊಂದಿದ ಒಂದು ಪ್ರಮುಖ ಕಂಪನಿಯಾಗಿದೆ. ಈ ಕಾರ್ಖಾನೆಗಳಲ್ಲಿ ಕಾರ್ಮಿಕರನ್ನು ಶೋಷಿಸುವ ಹೊಸ ವಿಧಾನವೊಂದನ್ನು ಆಡಳಿತವರ್ಗದವರು ಕಂಡುಕೊಂಡಿದ್ದಾರೆ. ಅದುವೇ "ಕಾಂಪ್ ಆಫ್ ಗಂಟೆಗಳು". ಇದರ ವಿರುದ್ಧ GATWUವಿನ ಕೆಲವು ಕ್ರಮಗಳು.*

ಶಾಹಿ ಎಕ್ಸ್‌ಪೋರ್ಟ್ಸ್ ಕಾರ್ಖಾನೆಗಳಲ್ಲಿ

- ಕಂಪನಿಯಲ್ಲಿ ಕೆಲಸವಿಲ್ಲದ ದಿನಗಳಂದು ಸಂಜೆ 5.30ಕ್ಕೆ ಮೊದಲೇ ಕಾರ್ಮಿಕರನ್ನು ಮನೆಗೆ ಕಳುಹಿಸುವುದು. ಮತ್ತು ಆ ಕೆಲಸದ ಗಂಟೆಗಳನ್ನು ಕಾರ್ಮಿಕರ ಖಾತೆಗೆ ಜಮಾ ಮಾಡುವುದು,
- ಇದು ದಿನದಿಂದ ದಿನಕ್ಕೆ ಹೆಚ್ಚುತ್ತಾ ಕೆಲವು ಕಾರ್ಮಿಕರ ಖಾತೆಗಳಲ್ಲಿ 50 ರಿಂದ 150 ಗಂಟೆಗಳಷ್ಟು ಏರಿಕೆಯಾಗುವುದು,
- ಕೆಲಸ ಹೆಚ್ಚಿದಾಗ ಕಾರ್ಮಿಕರನ್ನು ಬೆಳಗ್ಗೆ, ಸಂಜೆ ಯಾವುದೇ ಹೆಚ್ಚುವರಿ ಭತ್ಯೆಯಿಲ್ಲದೆ ಕೆಲಸ ಮಾಡಲು ಒತ್ತಾಯಿಸುವುದು, ಹಾಗೂ ಮಾಡುವಂತೆ ಬೆದರಿಸುವುದು,
- ಇದರ ಒತ್ತಡ ತಾಳಲಾರದೆ, ಇದರಿಂದ ತಪ್ಪಿಸಿಕೊಳ್ಳಲು ಕಾರ್ಮಿಕರು ತಮ್ಮ ಕೆಲಸಕ್ಕೆ ರಾಜೀನಾಮೆ ನೀಡುತ್ತಿರುವುದು.
- ರಾಜೀನಾಮೆ ನೀಡಿದಾಗ ಕಾರ್ಮಿಕರ ಸೆಟಲ್‌ಮೆಂಟ್‌ನಲ್ಲಿ ಈ ಗಂಟೆಗಳ ವೇತನವನ್ನು ಕಡಿತ ಮಾಡಿಕೊಳ್ಳುತ್ತಿರುವುದು

ಇವೆಲ್ಲವೂ GATWUವಿನ ಗಮನಕ್ಕೆ ಬಂದಾಗ ತಕ್ಷಣವೇ ಕಾರ್ಯಪ್ರವೃತ್ತವಾಗಿ ದಿನಾಂಕ 03-05-2013ರಂದು ಶಾಹಿ ಎಕ್ಸ್‌ಪೋರ್ಟ್ಸ್ ಕಾರ್ಖಾನೆಯ ಅಧ್ಯಕ್ಷರಿಗೆ ಮತ್ತು ಜನರಲ್ ಮ್ಯಾನೇಜರ್ (ಹೆಚ್.ಆರ್)ರವರಿಗೆ ಪತ್ರ ಬರೆದಿತ್ತು. ಇದಕ್ಕೆ ಉತ್ತರವಾಗಿ ತಮ್ಮ ಜನರಲ್ ಮ್ಯಾನೇಜರ್ (ಹೆಚ್.ಆರ್)ರವರು, "ನಮ್ಮ ಕಾರ್ಖಾನೆಯಲ್ಲಿ ಆ ರೀತಿ ನಡೆಯುತ್ತಿಲ್ಲ, ಆ ರೀತಿ ನಡೆಯಲು ನಾವು ಬಿಡುವುದಿಲ್ಲ" ಎಂದು ದಿನಾಂಕ 08-05-2013 ರಂದು ಇ.ಮೇಲ್ ಮೂಲಕ ತಿಳಿಸಿದ್ದಾರೆ.

*ಗೆಜ್ಜಲಗೆರೆ ಶಾಹಿಎಕ್ಸ್ ಪೋರ್ಟ್ಸ್ ಯೂನಿಟ್‌ನಲ್ಲಿ ಕರಪತ್ರವನ್ನು ಹಂಚುವಾಗ ಆದ ಅನುಭವವನ್ನು ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್‌ನ ಕಾರ್ಯಕಾರೀ ಸಮಿತಿಯ ಸದಸ್ಯರು ಹಾಗೂ ಕಾರ್ಯಕರ್ತರಾಗಿಯೂ ಕೆಲಸ ಮಾಡುತ್ತಿರುವ ರಾಜು ಬಿ.ಸಿ ಅವರು ಹಂಚಿಕೊಂಡಿದ್ದಾರೆ.*

*"ನಾವು (ನಾನು, ರತ್ನ ಮತ್ತು ಮದೀನಾ ತಾಜ್) ದಿನಾಂಕ 15.6.2013 ರಂದು ಕರಪತ್ರ ಹಂಚಲು ಗೆಜ್ಜಲಗೆರೆ ಶಾಹಿ ಎಕ್ಸ್‌ಪೋರ್ಟ್ಸ್‌ಗೆ ಹೋಗಿದ್ದೆವು. ಸುಮಾರು 4.30 ರ ಹೊತ್ತಿಗೆ ಸುಮಾರು 50 ಕಾರ್ಮಿಕರು ಕೆಲಸ ಮುಗಿಸಿ ಹೋಗುತ್ತಿದ್ದರು. ಅವರಿಗೆ ಕರಪತ್ರ ಹಂಚಿದೆವು. ಅಷ್ಟರಲ್ಲಿ ಕಾರ್ಖಾನೆಯ ಎಚ್.ಆರ್ ಡಿಪಾರ್ಟ್‌ಮೆಂಟ್‌ನ ರವಿ ಎಂಬವವರು ಬಂದು 'ಯಾರು ನೀವು ಏನು ಮಾಡುತ್ತಿದ್ದೀರಿ?' ಎಂದು ನಮ್ಮನ್ನು ಗದರಿಸಿದರು. ನಾವು ವಿಷಯವನ್ನು ವಿವರಿಸಿದೆವು. ಆದರೆ ಅವರು ದೂರವಾಣಿ ಮೂಲಕ ಹಲವರನ್ನು ಅಲ್ಲಿಗೆ ಕರೆಸಿದರು. ಶಿವುಗೌಡ, ಸುರೇಶ್, ಅನಿತಾ, ಗಿರೀಶ್, ಗೌಡ ಬಂದು ಇಲ್ಲಿ ನೀವು ಕರಪತ್ರ ಹಂಚಬೇಡಿ" ಎಂದು ಬೆರಿಕೆ ಹಾಕಿದರು. ಸುಮಾರು 5.15ರ ಹೊತ್ತಿಗೆ ಕಿಟ್ಟಿ ಮತ್ತು ಹರೀಶ್ ಎನ್ನುವವರು ನಮ್ಮ ಕೈಯಿಂದ ಕರಪತ್ರಗಳನ್ನು ಕಿತ್ತುಕೊಂಡು ಇನ್ನೊಮ್ಮೆ ಇಲ್ಲಿಗೆ ಬಂದರೆ ಚೆನ್ನಾಗಿರುವುದಿಲ್ಲ ಎಂದು 100 ಮಂದಿಯನ್ನು ಸೇರಿಸಿ ನಮಗೆ ಕರಪತ್ರ ಹಂಚಲು ಬಿಡಲಿಲ್ಲ."*

ಈ ವಿಷಯವು ಕಾರ್ಮಿಕರಿಗೆ ತಿಳಿಯುವುದು ಬಹು ಮುಖ್ಯವೆಂದು ಪರಿಗಣಿಸಿಸಲಾಯಿತು. ಆದ್ದರಿಂದಲೇ ಈ ಬಗ್ಗೆ ಕರಪತ್ರಗಳನ್ನು ಮುದ್ರಿಸಿ, ಶಾಹಿ ಎಕ್ಸ್‌ಪೋರ್ಟ್ಸ್ ಕಾರ್ಖಾನೆಯ ಕಾರ್ಮಿಕರಿಗೆ ತಿಳುವಳಿಕೆ ಮೂಡಿಸಲು ಪ್ರಾರಂಭಿಸಿದಾಗ, ಆಡಳಿತ ವರ್ಗವು ಕಾರ್ಯಕರ್ತರನ್ನು ಬೆದರಿಸಿ ಅವರ ಫೋಟೋ ತೆಗೆದುಕೊಂಡು ಕರಪತ್ರಗಳನ್ನು ಬಲವಂತವಾಗಿ ಕಸಿದುಕೊಂಡ ಘಟನೆಗಳೂ ನಡೆಯಿತು

ಆಡಳಿತವರ್ಗದವರು ಈ ರೀತಿ ಕಾರ್ಯಕರ್ತರ ಮೇಲೆ ದಾಳಿ ನಡೆಸಿರುವುದು ಅತ್ಯಂತ ಅನ್ಯಾಯವಾಗಿದೆ. ಇದರಿಂದಲೇ ಕಾರ್ಮಿಕರನ್ನು ಎಷ್ಟು ದಬ್ಬಾಳಿಕೆ ನಡೆಸಿ ಶೋಷಿಸುತ್ತಿದ್ದಾರೆ ಎಂದು ಸ್ಪಷ್ಟವಾಗಿ ತಿಳಿಯುತ್ತಿದೆ.

ಆಡಳಿತವರ್ಗದವರು ಕಾರ್ಮಿಕರಿಂದ ಈ ರೀತಿ ಕಾಂಪ್‌ಆಫ್ ಮಾಡಿಸುವುದು ಕಾನೂನು ಬಾಹಿರ ಹಾಗೂ ಕಾರ್ಮಿಕರಿಗೆ ಮಾಡುತ್ತಿರುವ ಅನ್ಯಾಯ. ಕಾರ್ಖಾನೆಯಲ್ಲಿ ದಿನಕ್ಕೆ 8 ಗಂಟೆಗಳೂ ಕೆಲಸವಿರುವಂತೆ ನೋಡಿಕೊಳ್ಳುವುದು ಕಾರ್ಖಾನೆಯ ಜವಾಬ್ದಾರಿಯಾಗಿರುತ್ತದೆ. ಕಾರ್ಮಿಕರೆಂದೂ ಅದಕ್ಕೆ ಹೊಣೆಗಾರರಲ್ಲ. ಇಲ್ಲಿಯವರೆಗೂ ನಿಮ್ಮ ಖಾತೆಯಲ್ಲಿ ನೀವು ಕೆಲಸ ಮಾಡಿಕೊಡಬೇಕಾದ ಕಾಂಪ್‌ಆಫ್ ಗಂಟೆಗಳು ಬಾಕಿ ಉಳಿದಿದ್ದರೆ ಅದನ್ನು ನೀವು ಮಾಡಿಕೊಡುವ ಅಗತ್ಯವಿಲ್ಲ. ಮಾಡಿಕೊಡಲೇ ಬೇಕೆಂದು ಒತ್ತಾಯಿಸಿದರೆ ಈ ಕೆಳಗಿನ ವಿಳಾಸ ಅಥವಾ ಸಂಖ್ಯೆಯಲ್ಲಿ ಯೂನಿಯನ್‌ಗೆ ತಿಳಿಸಿ, ಮತ್ತು ಇನ್ನು ಮುಂದೆ ಈ ರೀತಿ ಆದಲ್ಲಿ ಅದನ್ನು ಪ್ರತಿಭಟಿಸಿ. ❐


**ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)**

ನಂ. 17/1, ಮೊದಲನೇ ಮಹಡಿ, ಹೊಸಗುಡ್ಡದ ಹಳ್ಳಿ, ಮೈಸೂರು ರಸ್ತೆ, ಬೆಂಗಳೂರು-560026, ಫೋನ್: **080-26745242**

ನಂ.13. ಮುನೇಶ್ವರ ದೇವಸ್ಥಾನದ ಹತ್ತಿರ, 5ನೇ ಅಡ್ಡರಸ್ತೆ, ನೆಲಗೆದರನಹಳ್ಳಿ, ನಾಗಸಂದ್ರ ಪೋಸ್ಟ್, ಬೆಂಗಳೂರು-560073
ಮೊಬೈಲ್ ಸಂಖ್ಯೆಗಳು: **9686229761, 9844714476, 9901290495, 9880437877**





Scanned with OKEN Scanner

# ಗಾರ್ಮೆಂಟ್ಸ್ ಉದ್ಯಮದ ಕನಿಷ್ಠ ವೇತನ ಇತಿಹಾಸದಲ್ಲೊಂದು ಮೈಲಿಗಲ್ಲಾದ ಉಚ್ಚ ನ್ಯಾಯಾಲಯದ ತೀರ್ಪು



*ಸರ್ಕಾರವು ತಾನು ನಿಗದಿ ಪಡಿಸಿದ ರೂ.127 ಕನಿಷ್ಠ ವೇತನವಿರುವ ಆದೇಶವನ್ನು ತಾನೇ ಹಿಂಪಡೆದು ರೂ. 4.88 ಗಳನ್ನು ಕಡಿಮೆ ಮಾಡಿ ಹೊಸ ಆದೇಶವನ್ನು ಹೊರಡಿಸಿದ ವಿರುದ್ಧ GATWUವು ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿತ್ತು. ದಿನಾಂಕ 11.3.2013 ರಂದು ಉಚ್ಚ ನ್ಯಾಯಾಲಯವು, ಕಾರ್ಮಿಕರಿಗೆ ವೇತನವನ್ನು ಕಡಿಮೆ ಮಾಡಿ ಹೊರಡಿಸಿರುವ ಸರ್ಕಾರದ ಹೊಸ ಆದೇಶವು ಅಸಿಂಧು ಹಾಗೂ ಅದನ್ನು ರದ್ದುಗೊಳಿಸಬೇಕೆಂದು ತೀರ್ಪು ನೀಡಿದೆ. ಈ ಮೂಲಕ ಗಾರ್ಮೆಂಟ್ಸ್ ಕಾರ್ಮಿಕರ ವೇತನ ಹೆಚ್ಚಳ ಕುರಿತ ಹೋರಾಟಕ್ಕೊಂದು ಹೊಸ ಬೆಳವಣಿಗೆ ದೊರಕಿದೆ.*

### ಹಿನ್ನೆಲೆ

ಸರ್ಕಾರವು 1979 ರಲ್ಲಿ ಗಾರ್ಮೆಂಟ್ಸ್ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ನಿಗದಿ ಪಡಿಸಿ ಆದೇಶವನ್ನು ಹೊರಡಿಸಿತು. ಗಾರ್ಮೆಂಟ್ಸ್ ಕಾರ್ಖಾನೆಯ ಆಡಳಿತವರ್ಗವು ಈ ಆದೇಶವನ್ನು ಜಾರಿಗೊಳಿಸದೆ ಹಲವಾರು ನೆಪಗಳನ್ನು ತೆಗೆದು ನ್ಯಾಯಾಲಯದಲ್ಲಿ ಪ್ರಶ್ನಿಸುತ್ತಾ ಕಾಲವಿಳಂಬ ಮಾಡುತ್ತಾ ಕಾರ್ಮಿಕರಿಗೆ ಸರಿಯಾದ ವೇತನವನ್ನು ನೀಡದೆ ಸತಾಯಿಸಿ ಕೊನೆಗೆ 1986 ರಲ್ಲಿ ಗಾರ್ಮೆಂಟ್ಸ್ ಉದ್ಯಮಕ್ಕೆ ಕನಿಷ್ಠ ವೇತನವನ್ನು ಜಾರಿಗೊಳಿಸಿತು. ಕನಿಷ್ಠ ವೇತನ ಕಾಯಿದೆಯ ಪ್ರಕಾರ, ಕನಿಷ್ಠ ವೇತನವನ್ನು 3 ರಿಂದ 5 ವರ್ಷಗಳ ಒಳಗೆ ಪರಿಷ್ಕರಿಸಬೇಕು. ಈ 35 ವರ್ಷದ ಅವಧಿಯಲ್ಲಿ ಕನಿಷ್ಠ ವೇತನವನ್ನು ಹೆಚ್ಚೆಂದರೆ ಕಡಿಮೆಯೆಂದರೂ 10 ಬಾರಿ ಪರಿಷ್ಕರಿಸಬೇಕಾಗಿತ್ತು. ಆದರೆ ಸರ್ಕಾರ ಮತ್ತು ಆಡಳಿತವರ್ಗಗಳು ತಮ್ಮ ಅಸಹಕಾರ ಮತ್ತು ನಿರ್ಲಕ್ಷ್ಯತೆಯಿಂದ ಕೇವಲ 4 ಬಾರಿ ಮಾತ್ರ ಕನಿಷ್ಠ ವೇತನವು ಪರಿಷ್ಕರಣೆ ಮಾಡುವ ಮೂಲಕ ಗಾರ್ಮೆಂಟ್ಸ್ ಕಾರ್ಮಿಕರಿಗೆ ವಂಚನೆ ಮತ್ತು ಅನ್ಯಾಯ ಎಸಗಿದ್ದಾರೆ. ಕಾರ್ಮಿಕರನ್ನು ಪ್ರತಿನಿಧಿಸುವ ಯಾವುದೇ ಬಲವಾದ ಸಂಘಟನೆಯು ಇಲ್ಲದಿದ್ದುದರಿಂದ ಕಾರ್ಮಿಕರು ಈ ರೀತಿ ವಂಚನೆಗೊಳಗಾಗ ಬೇಕಾಯಿತು.

2006ರಲ್ಲಿ GATWUವು ಗಾರ್ಮೆಂಟ್ಸ್ ಕಾರ್ಮಿಕರನ್ನು ಸಮರ್ಥವಾಗಿ ಪ್ರತಿನಿಧಿಸಲು ಪ್ರಾರಂಭಿಸಿದ ನಂತರ 2007 ರಲ್ಲಿ ಕನಿಷ್ಠ ವೇತನ ಆಂದೋಲನವನ್ನು ಪ್ರಾರಂಭಿಸಿತು. ಗಾರ್ಮೆಂಟ್ಸ್ ಕಾರ್ಮಿಕರಿಗೆ ಅತಿ ಕಡಿಮೆ ವೇತನವಿರುವ ಬಗ್ಗೆ ಕಾರ್ಮಿಕ ಸಚಿವರಿಗೆ, ಮಾನವ ಹಕ್ಕು ಆಯೋಗಕ್ಕೆ, ಮೆಮೊರಾಂಡಮ್‌ಗಳನ್ನು ಸಲ್ಲಿಸಿತು. ಈ ಮೂಲಕ ಕಾರ್ಮಿಕ ಇಲಾಖೆಯ ಮೇಲೆ ಒತ್ತಡ ತಂದು, 2007ರಲ್ಲಿ ಕನಿಷ್ಠ ವೇತನ ಪರಿಷ್ಕರಣೆಗಾಗಿ ಕರಡು ಆದೇಶವನ್ನು ಹೊರಡಿಸುವಲ್ಲಿ ಯಶಸ್ವಿಯಾಯಿತು. ಆದರೆ ಎಷ್ಟೇ ಪ್ರಯತ್ನ ಪಟ್ಟರೂ 2009ರ ಮಾರ್ಚ್‌ವರೆವಿಗೂ ಈ ಕರಡು ಆದೇಶವು ಅಂತಿಮ ಆದೇಶವಾಗಲಿಲ್ಲ. ಕೊನೆಗೂ 2009ರ ಮಾರ್ಚ್‌ನಲ್ಲಿ ಗಾರ್ಮೆಂಟ್ಸ್ ಕಾರ್ಮಿಕರಿಗೆ 127 ರೂ.ಗಳನ್ನು ನಿಗದಿ ಗೊಳಿಸಿ, ಅಂತಿಮ ಆದೇಶವು ಹೊರಬಂತು.

ಆದರೆ ಈ ಆದೇಶವನ್ನು ಸುಮಾರು 1 ವರ್ಷಗಳ ಕಾಲ ಯಾವ ಮ್ಯಾನೇಜ್‌ಮೆಂಟ್ ಸಹ ಮಾನ್ಯ ಮಾಡಲಿಲ್ಲ. ಕಾರ್ಮಿಕರಿಗೆ ಕನಿಷ್ಠ ವೇತನವನ್ನು ನೀಡಲಿಲ್ಲ. ಆಡಳಿತವರ್ಗಕ್ಕೆ, ಸರ್ಕಾರಕ್ಕೆ ಹಲವಾರು ಬಾರಿ ಪತ್ರ ಬರೆದು GATWU ಮನವಿ ಮಾಡಿದರೂ ಪ್ರಯೋಜನವಾಗಲಿಲ್ಲ. ಕಡೆಗೆ ಬೇರೆ ದಾರಿ ಕಾಣದೆ 2010 ಫೆಬ್ರವರಿ 10ರಂದು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಕನಿಷ್ಠ ವೇತನವನ್ನು ಜಾರಿ ಮಾಡಲು ಆದೇಶಿಸುವಂತೆ ರಿಟ್ ಅರ್ಜಿ ಹಾಕಲಾಯಿತು.

ವಿಪರ್ಯಾಸ ಎಂದರೆ ಯಾವ ಸರ್ಕಾರ ಕಾರ್ಮಿಕರನ್ನು ರಕ್ಷಿಸ ಬೇಕಿತ್ತೋ ಅದೇ ಸರ್ಕಾರವು ಮಾಲೀಕರ ಒತ್ತಾಯಕ್ಕೆ ಮಣಿದು 1 ವರ್ಷದ ನಂತರ ಅಂದರೆ 2010ರ ಮಾರ್ಚ್ 30ರಂದು ತನ್ನ ಹಿಂದಿನ ಆದೇಶವನ್ನು ಹಿಂತೆಗೆದುಕೊಂಡು ರೂ. 127ರಿಂದ 122ಕ್ಕೆ (ದಿನಕ್ಕೆ 4.88 ರೂ.) ಇಳಿಸಿ ಹೊಸ ಆದೇಶವನ್ನು ಹೊರಡಿಸಿತು ಈ ಮೂಲಕ ಗಾರ್ಮೆಂಟ್ಸ್ ಕಾರ್ಮಿಕರಿಗೆ ಅನ್ಯಾಯವನ್ನೆಸಗಿತ್ತು.

ಈ ಅನ್ಯಾಯದ ವಿರುದ್ಧ GATWUವು ಪುನಃ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿತು. ಕೇಸ್ ಅನ್ನು ಕೂಲಂಕಷವಾಗಿ ಪರಿಶೀಲಿಸಿ ವಿಚಾರಣೆ ನಡೆಸಿದ ನಂತರ, ಉಚ್ಚ ನ್ಯಾಯಾಲಯವು ಸರ್ಕಾರದ 2010ರ ಹೊಸ ಆದೇಶವು ಅಸಿಂಧುವೆಂದು ರದ್ದುಗೊಳಿಸಿದೆ. 33 ವರ್ಷಗಳ ನಂತರ ಕಾರ್ಮಿಕರನ್ನು ಸಮರ್ಥವಾಗಿ ಪ್ರತಿನಿಧಿಸುವ GATWU ಜಯ ಗಳಿಸಿದೆ.

□

## ಬಿಸಿಯ ಕೆಂಪು – ಎ.ಸಿ.ಯ ತಂಪು

ಸೂಜಿಯ ಮೊನೆಯಲ್ಲಿ
ದಾರವ ತೂರಿಸಿ ಬಟ್ಟೆಯ ಹೊಲೆದಾಯ್ತು
ಠಣ-ಠಣ ಎನ್ನುವ ಯಂತ್ರದ
ಬಿಸಿಯಲಿ ಕಾರ್ಮಿಕ ದೇಹವು ಕೆಂಪಾಯ್ತು
ಓ.ಟಿಯ ನೆಪದಲಿ ಓ.ಸಿಯ ಮಾಡಿಸಿ
ಎ.ಸಿ ಯ ರೂಂ ನಲ್ಲಿ ಮಾಲೀಕ ದೇಹವು ತಂಪಾಯ್ತು.

■ *ನೇತ್ರಾವತಿ*

### ಕಾರ್ಮಿಕರಲ್ಲಿ ಮನವಿ

ಆತ್ಮೀಯರೇ, ಇದು ನಿಮ್ಮ ಪತ್ರಿಕೆ, ನೀವು ಹಣ ನೀಡಿ ಕೊಂಡು ಓದಿದರೇ ಈ ಪತ್ರಿಕೆ ಮುಂದುವರೆಯಲು ಸಾಧ್ಯವಾಗುತ್ತದೆ. ಕಾರ್ಮಿಕರಿಗಾಗಿ ಇರುವ ಪತ್ರಿಕೆಯನ್ನು ಕಾರ್ಮಿಕರೇ ಉಳಿಸಬೇಕು. ಆದ್ದರಿಂದ ದಯವಿಟ್ಟು ಪತ್ರಿಕೆಯನ್ನು ದುಡ್ಡು ಕೊಟ್ಟು ಖರೀದಿಸಬೇಕೆಂದು ಈ ಮೂಲಕ ತಮ್ಮನ್ನು ಕೇಳಿಕೊಳ್ಳುತ್ತಿದ್ದೇವೆ.

*–ಸಂ.ಮಂ.*



Scanned with OKEN Scanner

## 2013–2014ರ ತುಟ್ಟಿ ಭತ್ಯೆ

ಕರ್ನಾಟಕ ರಾಜ್ಯಸರ್ಕಾರವು, 2013–2014ರ ವಾರ್ಷಿಕ ತುಟ್ಟಿಭತ್ಯೆಯನ್ನು (ಡಿ.ಎ.)ಯನ್ನು ಘೋಷಿಸಿದ್ದು, ದಿನಾಂಕ 01–04–2013 ರಿಂದ ಜಾರಿಯಾಗುವಂತೆ, ಮೇ ತಿಂಗಳ ವೇತನದೊಂದಿಗೆ ರೂ. 541.06ನ್ನು ಸೇರಿಸಿ ಕೊಡಬೇಕು. ಏರಿಕೆಯಾಗಿರುವ ಅಂಶಗಳು ಈ ಕೆಳಗಿನಂತಿವೆ.

ಹೆಚ್ಚಳವಾದ ಅಂಶಗಳು : 451 ಅಂಶಗಳು

ಪ್ರತಿ ಅಂಶಕ್ಕೆ : 4 ಪೈಸೆ (451 X 4ಪೈಸೆ X 30 ದಿನಗಳು + 26 ದಿನಗಳು)

ಪ್ರತಿ ದಿನಕ್ಕೆ : ರೂ. 20.81

ಒಟ್ಟು ಹೆಚ್ಚಳ ತಿಂಗಳಿಗೆ : 541.06 ರೂ.

ಪ್ರತಿ ವರ್ಷ ಏಪ್ರಿಲ್ ತಿಂಗಳಿನಲ್ಲಿ ಸರ್ಕಾರ ಡಿ.ಎ.ಯನ್ನು ಪರಿಷ್ಕರಿಸುತ್ತದೆ. ಪ್ರತಿಯೊಬ್ಬ ಕಾರ್ಮಿಕರಿಗೂ 2012ರ ಮೇ ತಿಂಗಳ ವೇತನದಲ್ಲಿ ಹೆಚ್ಚಳವಾದ ಡಿ.ಎ.ಯನ್ನು ಸೇರಿಸಿ ಕೊಡಬೇಕು. ಉದಾಹರಣೆಗೆ ಹೆಲ್ಪರ್ ಒಬ್ಬರಿಗೆ ತಿಂಗಳಿಗೆ ಕನಿಷ್ಠ 5031.26 ರೂ. (ರೂ. 193.51 X 26 ದಿನಗಳು) ಸಿಗಬೇಕು. ಕನಿಷ್ಠ ವೇತನಕ್ಕಿಂತ ಹೆಚ್ಚು ವೇತನ ಪಡೆಯುತ್ತಿರುವ ಕಾರ್ಮಿಕರಿಗೂ ಸಹ ಈ ಡಿ.ಎ.ಯನ್ನು ಕೊಡಬೇಕು.

## ಹೆಚ್ಚಳವಾದ ಡಿ.ಎ. ನೀಡದೆ ಕಾರ್ಮಿಕರನ್ನು ವಂಚಿಸುತ್ತಿರುವ ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್

ದೇಶದ ಉಡುಪು ರಫ್ತು ಕ್ಷೇತ್ರದಲ್ಲಿ ಮುಂಚೂಣಿಯಲ್ಲಿನ ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಕಾರ್ಮಿಕರನ್ನು ಹಲವಾರು ರೀತಿಯಲ್ಲಿ ವಂಚಿಸುತ್ತಿದ್ದು, ಈಗ ಹೆಚ್ಚಳವಾಗಿರುವ ಡಿ.ಎ.ಯನ್ನು ಎಲ್ಲರಿಗೂ ಪೂರ್ಣ ಪ್ರಮಾಣದಲ್ಲಿ ನೀಡದೆ ಕಾರ್ಮಿಕರನ್ನು ವಂಚಿಸುತ್ತಿದೆ.

2013ರ ತುಟ್ಟಿಭತ್ಯೆಯನ್ನು ಸರ್ಕಾರವು ಹೆಚ್ಚಿಸಿದೆ. ಈ ತುಟ್ಟಿಭತ್ಯೆಯನ್ನು ಎಲ್ಲ ಪ್ರಮುಖ ಕಾರ್ಖಾನೆಗಳು ಕಾರ್ಮಿಕರಿಗೆ ನೀಡಿವೆ. ಆದರೆ ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಕಾರ್ಖಾನೆ ಮಾತ್ರ ಕನಿಷ್ಠ ವೇತನಕ್ಕಿಂತ ಹೆಚ್ಚು ಪಡೆಯುತ್ತಿರುವ ಕುಶಲ ಕಾರ್ಮಿಕರಿಗೆ ಪೂರ್ಣ ಪ್ರಮಾಣದಲ್ಲಿ ಡಿ.ಎ.ಯನ್ನು ನೀಡಿಲ್ಲ. ಕಾರ್ಮಿಕರಿಗೆ ದಿನಕ್ಕೆ 7 ರಿಂದ 15 ರೂಗಳ ವರೆಗೆ ಮಾತ್ರ ನೀಡಿದೆ. ಈ ವಿಚಾರವಾಗಿ ಆಡಳಿತವರ್ಗವನ್ನು ಕಾರ್ಮಿಕರು ಪ್ರಶ್ನಿಸಿದರೆ 'ಇಷ್ಟವಿದ್ದರೆ ಕೆಲಸ ಮಾಡಿ' ಎಂದು ಬೆದರಿಸುತ್ತಿದ್ದಾರೆ.

ಈ ಸಂಬಂಧ, GATWU ವು, ಆಡಳಿತ ಮಂಡಳಿಗೆ ಪತ್ರ ಬರೆದಿತ್ತು. ಆದರೆ ಅವರಿಂದ ಯಾವುದೇ ರೀತಿಯ ಉತ್ತರ ಬಂದಿರುವುದಿಲ್ಲ. ಗೋಕಲ್‌ದಾಸ್ ಕಾರ್ಮಿಕರಿಗೆ ಆಗಿರುವ ಈ ಅನ್ಯಾಯದ ವಿರುದ್ಧ GATWUವು ಕಾರ್ಮಿಕರಿಗೆ ನ್ಯಾಯ ಸಿಗಬೇಕೆಂದು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೋರಾಟ ನಡೆಸುತ್ತಿದೆ.

# ಗಾರ್ಮೆಂಟ್ಸ್ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರವಾಸ




ದಿನಾಂಕ 3–5–2013 ರಂದು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯ ವತಿಯಿಂದ, ಗಾರ್ಮೆಂಟ್ಸ್ ಕಾರ್ಮಿಕರ ಮಕ್ಕಳಿಗೆ ಜವಾಹರಲಾಲ್ ನೆಹರೂ ತಾರಾಲಯ, ವಿಶ್ವೇಶ್ವರಯ್ಯ ಮ್ಯೂಸಿಯಂ, ಹಾಗೂ ಮತ್ಸ್ಯಾಲಯಕ್ಕೆ ಶೈಕ್ಷಣಿಕ ಪ್ರವಾಸ ಏರ್ಪಡಿಸಲಾಗಿತ್ತು. ಸುಮಾರು 25 ಮಕ್ಕಳು ಈ ಪ್ರವಾಸದಲ್ಲಿ ಪಾಲ್ಗೊಂಡಿದ್ದರು. ಅವರಲ್ಲಿ ನವೀನ್ ಸಿ.ಪಿ. ತಮ್ಮ ಅನುಭವವನ್ನು ತನ್ನ ಭಾಷೆಯಲ್ಲಿ ವಿವರಿಸಿದ್ದಾನೆ.

### *ನೆಹರೂ ತಾರಾಲಯ*

*"ನೆಹರೂ ತಾರಾಲಯಕ್ಕೆ ನನ್ನಂತಯೇ ಇರುವ ಗೆಳೆಯರು ಕೂಡ ಬಂದಿದ್ದರು. ಅಲ್ಲಿ ವಿಜ್ಞಾನಿಗಳ ಬಗ್ಗೆ ಮತ್ತು ಸೌರವ್ಯೂಹದ ಬಗ್ಗೆ ತಿಳಿಸಿಕೊಟ್ಟರು. ಭೂಮಿಯು ಇತರೆ ಗ್ರಹಗಳೊಂದಿಗೆ ಸೂರ್ಯನನ್ನು ಸುತ್ತುವುದಕ್ಕೆ ಸೂರ್ಯಕೇಂದ್ರಿತ ಮಾದರಿ ಎನ್ನುವರು. ಇದನ್ನು ಪ್ರತಿಪಾದಿಸಿದವರು ಆರ್ಯಭಟ. ಚಂದ್ರ, ಸೂರ್ಯ ಇತರ ಗ್ರಹಗಳು ಭೂಮಿಯನ್ನು ಸುತ್ತುವುದಕ್ಕೆ ಭೂಕೇಂದ್ರಿತ ಮಾದರಿ ಎನ್ನುತ್ತಾರೆ. ಇದನ್ನು ಪ್ರತಿಪಾದಿಸಿದವರು ಟಾಲೆಮಿಯ. ಖಗೋಳ ದೂರದರ್ಶಕವನ್ನು ರೂಪಿಸಿದವರು ಗೆಲಿಲಿಯೋ ಗೆಲಿಲಿ... ಹೀಗೇ ಇನ್ನೂ ಎಷ್ಟೋ ವಿಷಯಗಳನ್ನು ಕೂಡ ಅಲ್ಲಿ ತಿಳಿಸಿಕೊಟ್ಟರು. ನಮ್ಮ ಶಾಲೆಯ ಗುಣವತಿ ಮಿಸ್ ನಮಗೆಲ್ಲ ಒಂದು ಸಾರಿ ಹೋಗಿಬನ್ನಿ ಎಂದು ಹೇಳುತ್ತಿದ್ದರು. ಅದು ಇಷ್ಟು ಬೇಗ ಕೂಡಿಬರುತ್ತದೆ ಎಂದು ಗೊತ್ತಿರಲಿಲ್ಲ. ನೀವೂ ಹೋಗಿ ಬನ್ನಿ..."*

### *ವಿಶ್ವೇಶ್ವರಯ್ಯ ಮ್ಯೂಸಿಯಂ*

*"ನೆಹರೂ ತಾರಾಲಯ ನೋಡಿದಮೇಲೆ ನಾವು ಮ್ಯೂಸಿಯಂಗೆ ಹೋದೆವು. ಅಲ್ಲಿ ಚಿಕ್ಕ ಮಕ್ಕಳು, ದೊಡ್ಡ ಮಕ್ಕಳು ಆಟ ಆಡುವ ಆಟಸಾಮಾನುಗಳು ಇದ್ದವು. ಅಲ್ಲಿ ಕಂಪ್ಯೂಟರ್ ಸಹ ಇತ್ತು. ಮ್ಯೂಸಿಯಂ ಮುಂದೆ ವಿಮಾನ ನಿಂತಿತ್ತು. ಅದು ಬಹಳ ಚೆನ್ನಾಗಿತ್ತು. ಫೋನಿನಲ್ಲಿ ಮಾತಾಡುವ ಹಾಗೆ ಎರಡು ಟವರ್ ಇತ್ತು. ಇಲ್ಲಿಗೆ ನಮ್ಮನ್ನೆಲ್ಲ ಕರೆದುಕೊಂಡು ಬಂದಿದ್ದಕ್ಕೆ ತುಂಬಾ ಥ್ಯಾಂಕ್ಸ್, ಮತ್ಸ್ಯಾಲಯದಲ್ಲಿ ಎಷ್ಟೊಂದು ಚೆನ್ನಾಗಿರುವ ಮೀನುಗಳು ಇದ್ದವು, ಹಾವು ತರ ಇದ್ದ ಮೀನು, ಚಿಕ್ಕ ಚಿಕ್ಕ ಮೀನು, ದೊಡ್ಡ ಮೀನುಗಳೆಲ್ಲ ಇದ್ದವು. ಮೀನು ಟ್ಯಾಂಕ್ ಒಳಗೆ ಸಣ್ಣ ಗಿಡಗಳು, ಸಣ್ಣ ಸಣ್ಣ ಕಲ್ಲುಗಳು, ಶಂಖ, ಮಣ್ಣು ಎಲ್ಲ ತುಂಬ ಚೆನ್ನಾಗಿತ್ತು. ಮೀನುಗಳು ಕಿಲಕಿಲನೇ ಓಡಾಡುತ್ತಿದ್ದವು. ತುಂಬಾ ಚೆನ್ನಾಗಿತ್ತು.* □



# ಆರೋಗ್ಯ ಭಾಗ್ಯ

*'ಸೂಜಿದಾರ'ದಲ್ಲಿ ಖ್ಯಾತ ವೈದ್ಯರಾದ ಡಾ॥ ವಸುಂಧರಾ ಭೂಪತಿಯವರು ಸಾಮಾನ್ಯ ಆರೋಗ್ಯ ತೊಂದರೆಗಳಿಗೆ ಸುಲಭವಾಗಿ ಮಾಡಬಹುದಾದ ಮನೆಮದ್ದುಗಳನ್ನು ಕುರಿತು ಬರೆಯುತ್ತಿದ್ದಾರೆ.*

### ವಾಂತಿಯಾಗುತ್ತಿದ್ದಲ್ಲಿ:

- ಒಂದು ಚಮಚ ನಿಂಬೆರಸ ಮತ್ತು ಜೇನುತುಪ್ಪ ಬೆರೆಸಿ ಆಗಾಗ ಕುಡಿಯುತ್ತಿರಬೇಕು
- ಹಸಿಶುಂಠಿ ರಸ, ನಿಂಬೆರಸ, ಮತ್ತು ಜೇನುತುಪ್ಪ ಸೇರಿಸಿ ಕುಡಿಯಬೇಕು
- ಒಂದು ಲೋಟ ಎಳನೀರು ಮತ್ತು ನಾಲ್ಕು ಚಿಟಿಕಿ ಏಲಕ್ಕಿ ಪುಡಿ ಬೆರೆಸಿ ಕುಡಿಯಬೇಕು.
- ಹೆಸರು ಬೇಳೆ ಬೇಯಿಸಿ ತೆಗೆದ ಕಟ್ಟು, ತೆಂಗಿನ ಹಾಲು ಮತ್ತು ನೀರು ಬೆರೆಸಿ ಕುಡಿಯಬೇಕು.

### ಭೇದಿಯಾಗುತ್ತಿದ್ದಲ್ಲಿ:

- ದನಿಯ ಮತ್ತು ಮೆಂತ್ಯವನ್ನು ಮಜ್ಜಿಗೆಯಲ್ಲಿ ಅರೆದು ಕೊಡಬೇಕು.
- ದಾಳಿಂಬೆಯ ರಸವನ್ನು ಆಗಾಗ ಕುಡಿಯುತ್ತಿರಬೇಕು
- ಎರಡು ಲೋಟ ಹೆಸರು ಬೇಳೆ ಬೇಯಿಸಿ ತೆಗೆದ ಕಟ್ಟು, ಎರಡು ಲೋಟ ಮಜ್ಜಿಗೆ ಬೆರೆಸಿ ಅದಕ್ಕೆ ಕೊತ್ತಂಬರಿ, ಜೀರಿಗೆ, ಶುಂಠಿ, ಉಪ್ಪು ಹಾಕಿ ಎರಡು ಗಂಟೆಗೊಂದು ಬಾರಿ ಕುಡಿಯಬೇಕು.
- ಮೆಂತ್ಯದ ಕಾಳನ್ನು ತುಪ್ಪದಲ್ಲಿ ಹುರಿದು ಪುಡಿ ಮಾಡಿಟ್ಟುಕೊಂಡು ಅಥವಾ ಚಮಚೆಯಷ್ಟನ್ನು ಮಜ್ಜಿಗೆಯಲ್ಲಿ ಕದಡಿ ಪ್ರತಿ ನಾಲ್ಕು ಗಂಟೆಗೊಮ್ಮೆ ಕುಡಿಯಬೇಕು. □

*ಸ್ನೇಹಿತರೇ*


*ತಮಗೆ ಆರೋಗ್ಯದ ತೊಂದರೆಯ ಬಗ್ಗೆ ಪ್ರಶ್ನೆಯಿದ್ದಲ್ಲಿ, ಸೂಜಿ-ದಾರಕ್ಕೆ ಬರೆದು ತಿಳಿಸಿದರೆ, ಡಾ॥ ವಸುಂಧರಾ ಭೂಪತಿಯವರು ಅದಕ್ಕೆ ಉತ್ತರಿಸುತ್ತಾರೆ. ತಾವು ಪ್ರಶ್ನೆಗಳನ್ನು ಪೋಸ್ಟ್ ಕಾರ್ಡ್‌ನಲ್ಲಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಬಹುದು, ಅಥವಾ ಕಚೇರಿಗೇ ಬಂದು ತಲುಪಿಸಬಹುದು.*

***ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)***
*ನಂ. 17/1, ಮೊದಲನೇ ಮಹಡಿ, ಹೊಸಗುಡ್ಡದ ಹಳ್ಳಿ, ಮೈಸೂರು ರಸ್ತೆ, ಬೆಂಗಳೂರು-560026, ಫೋನ್: 080-26745242*

# ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರಿಗಾಗಿ ಆರೋಗ್ಯ ಸಂವಾದ

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಆರೋಗ್ಯದ ಬಗ್ಗೆ ಗಾ.ಮ.ಕಾ ಮುನ್ನಡೆಯು ಪ್ರಾರಂಭದಿಂದಲೂ ಹಲವಾರು ಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದೆ. ಉಚಿತ ಆರೋಗ್ಯ ತಪಾಸಣಾ ಶಿಬಿರ, ನೇತ್ರ ಚಿಕಿತ್ಸಾ ಶಿಬಿರ, ಜೊತೆಗೆ ಮಹಿಳೆಯರಿಗೆ ಉಚಿತ ವೈದ್ಯಕೀಯ ನೆರವು ಒದಗಿಸಲೂ ಸಹ ಸಹಾಯ ಮಾಡಿದೆ.





ದಿನಾಂಕ 12-5-2013ರಂದು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯು ಕರ್ನಾಟಕ ಲೇಖಕಿಯರ ಸಂಘದ ವತಿಯಿಂದ "ಗಾರ್ಮೆಂಟ್ಸ್ ಕಾರ್ಮಿಕ ಆರೋಗ್ಯ ಕುರಿತ ಸಂವಾದ"ವನ್ನು ಏರ್ಪಡಿಸಲಾಗಿತ್ತು. ಖ್ಯಾತ ವೈದ್ಯರುಗಳಾದ ಡಾ॥ಲೀಲಾವತಿ ದೇವದಾಸ್, ಡಾ॥ಎಚ್.ಎಸ್. ಅನುಪಮಾ, ಡಾ॥ ವಸುಂಧರಾ ಭೂಪತಿ ಅವರು ಈ ಸಂವಾದದಲ್ಲಿ ಪಾಲ್ಗೊಂಡು ಗಾರ್ಮೆಂಟ್ಸ್ ಕಾರ್ಮಿಕರ ಆರೋಗ್ಯ ಸಮಸ್ಯೆಗಳನ್ನು ಕುರಿತು ಚರ್ಚಿಸಿದರು ಹಾಗೂ ಅದಕ್ಕೆ ಕಾರಣಗಳು ಮತ್ತು ಪರಿಹಾರಗಳನ್ನು ಕುರಿತು ಸಲಹೆ ನೀಡಿದರು.

ಮಹಿಳೆಯರಿಗೆ ಕಾಡುವ ಸಾಮಾನ್ಯ ಆರೋಗ್ಯ ತೊಂದರೆಗಳೊಂದಿಗೆ, ದಿನವಿಡೀ ಗಾರ್ಮೆಂಟ್ಸ್‌ಗಳಲ್ಲಿ ದುಡಿಯುತ್ತಿರುವುದರಿಂದ ಕಾಡುವ ಆರೋಗ್ಯ ಸಮಸ್ಯೆಗಳನ್ನು ಮಹಿಳಾ ಕಾರ್ಮಿಕರು ಹಂಚಿಕೊಂಡರು. ಹೆಣ್ಣುಮಕ್ಕಳ ಅನೇಕ ಕಾಯಿಲೆಗಳಿಗೆ ದೇಹದ ಪೌಷ್ಠಿಕಾಂಶದ ಕೊರತೆಗಳು ಕಾರಣವಾಗುತ್ತವೆ. ಜೊತೆಗೆ ಮಹಿಳೆ ತನ್ನ ಆರೋಗ್ಯದ ಬಗ್ಗೆ ಹೆಚ್ಚು ಗಮನ ಹರಿಸುವುದಿಲ್ಲ. ಮನೆ ಮತ್ತು ಗಾರ್ಮೆಂಟ್ಸ್ ಹೀಗೆ ಎರಡು ಕಡೆ ದುಡಿಯುವ ಮಹಿಳೆಯರು ಸರಿಯಾದ ಪೌಷ್ಟಿಕತೆ ಹಾಗೂ ಕಾಳಜಿ ಇಲ್ಲದೆ ಹಲವಾರು ಕಾಯಿಲೆಗೆ ತುತ್ತಾಗುತ್ತಿದ್ದಾರೆ ಎಂದು ಎಲ್ಲ ವೈದ್ಯರುಗಳು ಅಭಿಪ್ರಾಯ ಪಟ್ಟರು. □

**ಈ ಕಾರ್ಯಕ್ರಮಕ್ಕೆ ಖರ್ಚಾದ ಮೊತ್ತದ ವಿವರ**

| | | |
|---|---|---|
| ಊಟ | : | ರೂ. 4,660/- |
| ಸಾರಿಗೆ ಖರ್ಚು | : | ರೂ. 3,200/- |
| ಬ್ಯಾನರ್ ಖರ್ಚು | : | ರೂ. 641/- |
| ಒಟ್ಟು | | ರೂ. 8,501/- |

### ತಿದ್ದುಪಡಿ

ಕಳೆದ ಸಂಚಿಕೆಯಲ್ಲಿ "ಕಾರ್ಮಿಕರಿಗೆ ತಿಳಿದಿರಲೇ ಬೇಕಾದ ಕಾನೂನು" ಅಂಕಣದಡಿಯಲ್ಲಿ ಪ್ರಕಟವಾದ ಗ್ರಾಚುಟಿ ಲೆಕ್ಕ ಹಾಕುವ ಸೂತ್ರವು ಕಣ್ತಪ್ಪಿನಿಂದಾಗಿ ತಪ್ಪಾಗಿ ಮುದ್ರಿತವಾಗಿತ್ತು. ದಯವಿಟ್ಟು ಅದನ್ನು ಈ ಕೆಳಕಂಡಂತೆ ಓದಿಕೊಳ್ಳಬೇಕಾಗಿ ವಿನಂತಿ.

**ಒಟ್ಟು ಸೇವೆಯ ವರ್ಷ X 15 ದಿನಗಳು X ಕಡೆಯಲ್ಲಿ ತೆಗೆದುಕೊಂಡ ವೇತನ ÷ 26**



Scanned with OKEN Scanner

## ಕಾಮನಬಿಲ್ಲು

# ಶುಭಾಶಯಗಳು

*2012–2013ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದ ಗಾರ್ಮೆಂಟ್ಸ್ ಕಾರ್ಮಿಕರ ಮಕ್ಕಳನ್ನು, ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಮತ್ತು GATWU ಅಭಿನಂದಿಸುತ್ತದೆ.*



ತನುಶ್ರೀ ಎಸ್.
ತಾಯಿ: ವಸಂತ
ಟೆಕ್ಸ್‌ಪೋರ್ಟ್ಸ್ ಕ್ರಿಯೇಶನ್ಸ್



ಕಾವ್ಯ
ತಾಯಿ: ವನಜಾಕ್ಷಿ
ದೇವಕಿ ಡಿಸೈನ್ಸ್



ತ್ರಿವೇಣಿ ಜಿ.ಕೆ
ತಾಯಿ: ರಂಗತಾಯಮ್ಮ
ಗೋಕಲ್‌ದಾಸ್ ಇಂಡಿಯಾ



ಗಿರೀಶ್ ಎಂ
ತಾಯಿ: ಗೌರಮ್ಮ
ಟೆಕ್ಸ್‌ಪೋರ್ಟ್ಸ್ ಕ್ರಿಯೇಶನ್ಸ್



ಅನೂಪ. ಕೆ
ತಾಯಿ: ಪೂರ್ಣಿಮಾ
ಟೆಕ್ಸ್‌ಪೋರ್ಟ್ಸ್ ಕ್ರಿಯೇಶನ್ಸ್



ಉದಯಕುಮಾರ್
ತಾಯಿ: ಭಾಗ್ಯ ಎ.
ಅನುವರ್ತ ಅಪಾರೆಲ್ಸ್

## ಬಿ.ಎಂ.ಟಿ.ಸಿ. ಬಸ್‌ದರ ಏರಿಕೆಯ ವಿರುದ್ಧ ಪ್ರತಿಭಟನೆ

ಕಳೆದ 2 ವರ್ಷಗಳಲ್ಲಿ ಬಿ.ಎಂ.ಟಿ.ಸಿ ಬಸ್ ದರವು ಜನಸಾಮಾನ್ಯರ ಕೈಗೆಟುಕದಷ್ಟು ಏರಿದ್ದು, ಬಡವರು ಬಸ್ ಏರಲೇ ಅನುಮಾನಿಸುವಂತಾಗಿದೆ. ಸರ್ಕಾರ ಬಸ್ಸ್ ದರವನ್ನು ಅವೈಜ್ಞಾನಿಕವಾಗಿ ಏರಿಸುತ್ತಿದೆ. ಇದರಿಂದ ಮಧ್ಯಮ ಮತ್ತು ಕೆಳಮಧ್ಯಮ ವರ್ಗದ ಜನರಿಗೆ ತುಂಬಾ ಕಷ್ಟವಾಗುತ್ತಿದೆ. ಆದ್ದರಿಂದ ಈ ಕೂಡಲೆ

- **ಬಸ್ ದರ ಏರಿಕೆಯನ್ನು ಈ ಕೂಡಲೇ ಹಿಂಪಡೆದು ಸಾರಿಗೆಯ ಮೇಲೆ ಮಾಸಿಕ ಖರ್ಚು ಸರ್ಕಾರ ನಿಗದಿ ಪಡಿಸಿರುವ ಕನಿಷ್ಠ ವೇತನದ ಶೇ 5ರಷ್ಟಕ್ಕಿಂತ ಹೆಚ್ಚಾಗದಂತೆ ಪ್ರಯಾಣ ದರ ನಿಗದಿಪಡಿಸಬೇಕು.**
- **ಸಾಮಾನ್ಯ ಶ್ರೇಣಿಯ ಬಸ್‌ಗಳನ್ನು ಹೆಚ್ಚಿಸಬೇಕು ಮತ್ತು ಹೊರವಲಯಗಳಿಗೆ ಬಸ್ ಸಂಪರ್ಕ ಕಲ್ಪಿಸಬೇಕು ಹಾಗೂ ಒಳಪ್ರದೇಶ ಹಾಗೂ ಕೊಳಚೆ ಪ್ರದೇಶಗಳಿಗೆ ಮಿನಿ ಬಸ್ ಸಂಪರ್ಕ ಕಲ್ಪಿಸಬೇಕು.**

ಎಂದು ಪರ್ಯಾಯ ಕಾನೂನು ವೇದಿಕೆ, ಸ್ಲಂ ಜನರ ಸಂಘಟನೆ, ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, GATWU ಮತ್ತು ಹಲವಾರು ಸಂಘಟನೆಗಳನ್ನೊಳಗೊಂಡ **ಬೆಂಗಳೂರು ಬಸ್ ಪ್ರಯಾಣಿಕರ ವೇದಿಕೆಯು** ದಿನಾಂಕ: 28–06–2013ರಂದು ನಗರದ ಶಾಂತಿನಗರ ಬಸ್ ನಿಲ್ದಾಣದ ಹತ್ತಿರ ಪ್ರತಿಭಟನೆ ಹಮ್ಮಿಕೊಂಡಿತ್ತು. ಈ ಆಂದೋಲನವು ಇನ್ನೂ ಮುಂದುವರೆಯಲಿದ್ದು, ತಾವೆಲ್ಲರೂ ಇದರಲ್ಲಿ ಭಾಗವಹಿಸಬೇಕಾಗಿ ಕರೆ ನೀಡುತ್ತಿದ್ದೇವೆ.

ಈಗಾಗಲೇ ಎಲ್ಲ ಅಗತ್ಯ ವಸ್ತುಗಳ ಬೆಲೆಗಳ ಏರಿಕೆಯಿಂದ ಕಂಗಾಲಾಗಿರುವ ಜನಸಾಮಾನ್ಯರನ್ನು, ಅಸಂಘಟಿತ ಕಾರ್ಮಿಕರನ್ನು ತಿಂಗಳಿಗೆ ಕೇವಲ 5000 ರೂ ವೇತನ ಪಡೆಯುವ ಗಾರ್ಮೆಂಟ್ಸ್ ಕಾರ್ಮಿಕರನ್ನು ಈ ರೀತಿ ಬಸ್ ದರ ಏರಿಸಿ ಶೋಷಿಸುತ್ತಿರುವ ಸರ್ಕಾರದ ಈ ಕ್ರಮವನ್ನು GATWU ಮತ್ತು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯು ಖಂಡಿಸುತ್ತದೆ.

## ನೆರವು

ಪ್ರತಿ ಶನಿವಾರ ಹಾಗೂ ಭಾನುವಾರಗಳಂದು, ಗಾರ್ಮೆಂಟ್ಸ್ ಕಾರ್ಮಿಕರು ಯಾವುದೇ ಕಾರ್ಮಿಕ ವಿವಾದಕ್ಕಾಗಿ, ತಮ್ಮ ಮೇಲಿನ ದೌರ್ಜನ್ಯ, ಕೌಟುಂಬಿಕ ಸಲಹೆಗಾಗಿ ತಜ್ಞ ವಕೀಲರನ್ನು ಈ ಕೆಳಕಂಡ ಸಂಸ್ಥೆಯಲ್ಲಿ ಉಚಿತವಾಗಿ ಸಂಪರ್ಕಿಸಬಹುದು

**ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ**
ನಂ. 376/ಹೆಚ್ ಮೊದಲನೇ ಮಹಡಿ, ಗಣೇಶ ದೇವಸ್ಥಾನದ ಹತ್ತಿರ, ನಾಯಂಡಹಳ್ಳಿ, ಮೈಸೂರು ರಸ್ತೆ, ಬೆಂಗಳೂರು–560 039.
ಶನಿವಾರ ಸಂಜೆ 5–30ರ ನಂತರ ಹಾಗೂ ಭಾನುವಾರ ಬೆಳಿಗ್ಗೆ 10–30ರ ನಂತರ
ಮೊ: 9686229761, 9901290495

## ಮಹಿಳಾ ಕಾರ್ಮಿಕರಿಗೆ ಸಹಾಯ ಮಾಡುವ ಇನ್ನಿತರೆ ಸಂಸ್ಥೆಗಳು

1. **ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)**
   ನಂ. 17/1, ಹೊಸ ಗುಡ್ಡದಹಳ್ಳಿ ಬಸ್‌ಸ್ಟಾಪ್ ಹತ್ತಿರ, ಮೈಸೂರು ರಸ್ತೆ, ಬೆಂಗಳೂರು–26. ದೂ: 080–26745242
   * * *
   ನಂ.13. ಮುನೇಶ್ವರ ದೇವಸ್ಥಾನದ ಹತ್ತಿರ, 5ನೇ ಅಡ್ಡರಸ್ತೆ, ನೆಲಗೆದರನಹಳ್ಳಿ, ನಾಗಸಂದ್ರ ಪೋಸ್ಟ್, ಬೆಂಗಳೂರು–560073
2. **ಕರ್ನಾಟಕ ಮಹಿಳಾ ಆಯೋಗ**
   ನಂ. 105, ಮೊದಲನೇ ಮಹಡಿ ಕರ್ನಾಟಕ ಗೃಹ ಮಂಡಳಿ ಕಟ್ಟಡ ಕಾವೇರಿಭವನ, ಕೆ.ಜಿ.ರಸ್ತೆ, ಬೆಂಗಳೂರು–560 009
   ದೂ.: 22216485
3. **ವಿಮೋಚನಾ**
   ನಂ, 33/1–9, ತ್ಯಾಗರಾಜ ಬಡಾವಣೆ ಜೈಭಾರತನಗರ, ಮಾರುತಿ ಸೇವಾನಗರ ಬೆಂಗಳೂರು–560 038
   ದೂ.: 25492781
4. **ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ**
   ನ್ಯಾಯ ದೇಗುಲ
   ಎಚ್. ಸಿದ್ಧಯ್ಯ ರಸ್ತೆ
   ಬೆಂಗಳೂರು–27

## ನಾಯಂಡಹಳ್ಳಿಯಲ್ಲಿ ಉಚಿತ ಲೈಬ್ರರಿ

**ಗಾರ್ಮೆಂಟ್ಸ್ ಕಾರ್ಮಿಕರಿಗಾಗಿ ಹಾಗೂ ಅವರ ಮಕ್ಕಳಿಗಾಗಿ ಗಾ.ಮ.ಕ. ಮುನ್ನಡೆಯ ನಾಯಂಡಹಳ್ಳಿ ಕಛೇರಿಯಲ್ಲಿ ಲೈಬ್ರರಿ ವ್ಯವಸ್ಥೆ ಇದ್ದು, ಆಸಕ್ತರು ಇದರ ಉಪಯೋಗವನ್ನು ಪಡೆಯಬಹುದು.**
**ಸಮಯ: ಮಂಗಳವಾರದಿಂದ ಶನಿವಾರ: ಸಂಜೆ 4 ರಿಂದ 7ರ ವರೆಗೆ, ಭಾನುವಾರ: ಬೆಳಿಗ್ಗೆ 10ರಿಂದ 2ರ ವರೆಗೆ**

ಸಂಪಾದಕ ಮಂಡಳಿ–ಪ್ರಕಾಶಕರು : **ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ**, ನಂ. 376/H, ಮೊದಲನೇ ಮಹಡಿ, ಗಣೇಶ ದೇವಸ್ಥಾನದ ಹತ್ತಿರ, ನಾಯಂಡಹಳ್ಳಿ, ಮೈಸೂರು ರಸ್ತೆ, ಬೆಂಗಳೂರು–560 039. । ಮುದ್ರಣ : ಇಳಾ ಮುದ್ರಣ, ಬೆಂಗಳೂರು – 560 026. ದೂ. : 26757159

Scanned with OKEN Scanner